ಮಂಜೂರಾದ ಸಹಾಯಧನವನ್ನು 414 ಘಟಕಗಳಿಗೆ ಹಂತ ಹಂತವಾಗಿ ನೀಡಲು ಉದ್ದೇಶಿಸಿದೆ.

ತರೀಕೆರೆ ಸಾರ್ವಜನಿಕರ ಆಸ್ಪತ್ರೆಯಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳು.

2571 - ಶ್ರೀ ಹೆಚ್.ಆರ್. ರಾಜು (ತರೀಕೆರೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತರೀಕೆರೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಇರುವ ವೈದ್ಯರ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಖಾಲಿ ಹುದ್ದೆಗಳನ್ನು ಭರ್ತಿಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೇ?

ಇ) ಒಂದು ವೇಳೆ ಹುದ್ದೆಗಳನ್ನು ಭರ್ತಿಮಾಡದಿದ್ದಲ್ಲಿ ಖಚಿತವಾಗಿ ಇವುಗಳನ್ನು ಎಂದಿನಿಂದ ಮಾಡಲಾಗುವುದು?

ಶ್ರೀ ಜಿ. ಪುಟ್ಟಸ್ವಾಮಿಗೌಡ. (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಐದು.

ಆ) ತೆಗೆದುಕೊಂಡಿದೆ. ಪ್ರಸ್ತುತ ಮೂರು ವೈದ್ಯರುಗಳು ಈ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಇನ್ನಿಬ್ಬರು ಇನ್ನೂ ಕರ್ತವ್ಯಕ್ಕೆ ಹಾಜರಾಗಬೇಕಾಗಿದೆ.

ಇ) ಎಲ್ಲಾ ಹುದ್ದೆಗಳನ್ನು ತುಂಬಿರುವುದರಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ಖಾಸಗೀ ಸಕ್ಕರೆ ಕಾರ್ಖಾನೆಗೆ ಪರವಾನಗಿ ನೀಡಿರುವ ಬಗ್ಗೆ.

2445 - ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಟಿ. ನರಸೀಪುರ ಕ್ಷೇತ್ರಕ್ಕೆ ಸೇರಿದ ಮಲ್ಲುಪುರದಲ್ಲಿ (ನಂಜನಗೂಡ ತಾ.) ನೂತನವಾಗಿ ಸ್ಥಾಪನೆಯಾಗುತ್ತಿರುವ ಖಾಸಗಿ ಸಕ್ಕರೆ ಕಾರ್ಖಾನೆಗೆ ಸರ್ಕಾರದ ಪರವಾನಗಿ ದೊರೆತಿದೆಯೇ?

ಆ) ಕಾರ್ಖಾನೆಯ ಸ್ಥಾಪನೆಗೆ ಸ್ವಾಧೀನಪಡಿಸಿಕೊಂಡಿರುವ ಜಮೀನಿನ ಮಾಲೀಕರುಗಳಿಗೆ ಸೂಕ್ತ ಬೆಲೆ ಸಿಕ್ಕಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದರೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಇ) ಸದರಿ ಕಾರ್ಖಾನೆಯಲ್ಲಿ ಸ್ಥಳೀಯರಿಗೆ ಉದ್ಯೋಗವನ್ನು ನೀಡಲಾಗುವುದೇ?

ಶ್ರೀಮತಿ ಮನೋರಮ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು) :

ಅ) ಶ್ರೀ ಬನ್ನಾರಿ ಅಮ್ಮನ್ ಶುಗರ್ಸ್ ಎಂಬ ನಾಮಾಂಕಿತವುಳ್ಳ ಖಾಸಗಿ ಸಕ್ಕರೆ ಕಾರ್ಖಾನೆಗೆ ಪರವಾನಗಿ ದೊರತಿದೆ.

ಆ) ಕಾರ್ಖಾನೆಯ ಸ್ಥಾಪನೆಗೆ ಸ್ವಾಧೀನಪಡಿಸಿಕೊಂಡಿರುವ ಜಮೀನಿನ ಮಾಲೀಕರುಗಳು ಕೆ.ಐ.ಎ.ಡಿ. ಕಾಯಿದೆ ಕಲಂ 29(2) ರ ಪ್ರಕಾರ ಒಪ್ಪಂದ ವರ್ಷಟ್ಟು ಪರಿಹಾರ ಧನ ಪಡೆದಿದ್ದು ಇವರ ಪೈಕಿ ಕೆಲವರು ಹೆಚ್ಚಿನ ಪರಿಹಾರ ಕೊಡಬೇಕೆಂದು ಅರ್ಜಿ ಸಲ್ಲಿಸಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದರೆ ಕೆ.ಐ.ಎ.ಡಿ. ಕಾಯಿದೆ ಪ್ರಕಾರ ಒಪ್ಪಂದ ವರ್ಷಟ್ಟು ಪರಿಹಾರ ಧನ ಪಡೆದಿರುವುದರಿಂದ ಹೆಚ್ಚಿನ ಪರಿಹಾರ ಕೊಡಲು ಅವಕಾಶವಿರುವುದು.

ಇ) ಸದರಿ ಕಾರ್ಖಾನೆಯು ಇನ್ನೂ ನಿರ್ಮಾಣ ಹಂತದಲ್ಲಿದ್ದು, ಕಾರ್ಖಾನೆಗೆ ಬೇಕಾಗುವ ಸಿಬ್ಬಂದಿ ವರ್ಗವನ್ನು ಇನ್ನೂ ಆಯ್ಕೆ ಮಾಡಬೇಕಾಗಿದೆ. ಕಾರ್ಖಾನೆಯು ಉದ್ಯೋಗ ನೀಡುವಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಬೇಕಾಗುತ್ತದೆ.

ಅಲೆಮಾರಿ ಜನಾಂಗದವರ ಅಭಿವೃದ್ಧಿಗಾಗಿ ಆಯವ್ಯಯದಲ್ಲಿ ಹಣ ನಿಗದಿಗೊಳಿಸುವ ಬಗ್ಗೆ.

1849ಎ - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *1991-92ನೇ ಸಾಲಿನ ಇಲಾಖೆಯ ಆಯವ್ಯಯದಲ್ಲಿ ಅಲೆಮಾರಿ ಜನಾಂಗದವರಿಗಾಗಿ ಯೋಜನೆ ಜಾರಿಗೊಳಿಸಲು ಹಣ ನಿಗದಿ ಮಾಡಲಾಗಿದೆಯೇ ಹಾಗಿದ್ದಲ್ಲಿ ಹಣದ ಮೊತ್ತವೆಷ್ಟು? ಇಲ್ಲದಿದ್ದಲ್ಲಿ ಇಲಾಖೆಯ ಒಟ್ಟಾರೆ ಖರ್ಚಿನಲ್ಲಿ ಉಳಿತಾಯ ಮಾಡಿ ಜಾರಿಗೊಳಿಸಲು ಯೋಜನೆ ಹಾಕಿಕೊಳ್ಳಲಾಗಿದೆಯೇ?*

ಆ) *ಕೇಂದ್ರ ಸರ್ಕಾರ ಸದರಿ ಜನಾಂಗದವರಿಗಾಗಿ ನೀಡಲಾಗುವ ಆರ್ಥಿಕ ಸಹಾಯವನ್ನು ಉಪಯೋಗಿಸಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳಾವ್ಯಾವು? ಇಲ್ಲದಿದ್ದಲ್ಲಿ ಯಾವುದೇ ಕ್ರಮ ಕೈಗೊಳ್ಳದೆ ಸದರಿ ಜನಾಂಗದವರಿಗೆ ಸಂವಿಧಾನದ ಹಕ್ಕಿನಿಂದ ವಂಚಿಸಲಾಗಿದೆಯೇ?*

ಇ) *ಜವಹಾರ್ ರೋಜಗಾರ್ ಯೋಜನೆಯಡಿಯಲ್ಲಿ ಸದರಿ ಜನಾಂಗದವರಿಗೆ ಕೈಗೊಂಡಿರುವ ವಿಶೇಷ ಕಾರ್ಯಕ್ರಮಗಳಾವ್ಯಾವು?*

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ) ಇಲ್ಲ. ಆದರೆ ಇವರುಗಳನ್ನು 'ಎ' ಗುಂಪಿನಡಿಯಲ್ಲಿ ಸೇರಿಸಿದ್ದು 'ಎ' ಗುಂಪಿನವರಿಗೆ ಆಯವ್ಯಯದಲ್ಲಿ 151.79 ಲಕ್ಷ ರೂ.ಗಳನ್ನು ಒದಗಿಸಲಾಗಿದೆ.

ಆ) ಈ ಯೋಜನಾ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರವು ಇನ್ನೂ ರೂಪಿಸಬೇಕಾಗಿರುವುದರಿಂದ ಹಣದ ಉಪಯೋಗದ ಪ್ರಶ್ನೆ ಸದ್ಯಕ್ಕೆ ಉದ್ಭವಿಸುವುದಿಲ್ಲ.

ಇ) ಯಾವುದು ಇಲ್ಲ.

ರೇಷ್ಮೆ ಅಭಿವೃದ್ಧಿ ಯೋಜನೆ

1849 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ರೇಷ್ಮೆ ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಅಲೆಮಾರಿ ಜನಾಂಗದವರಿಗೆ ವಿಶೇಷ ಸಮಗ್ರ ರೇಷ್ಮೆ ಅಭಿವೃದ್ಧಿ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆಯೇ? ಇಲ್ಲದಿದ್ದಲ್ಲಿ ಜಾರಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?*

ಆ) *ರಾಜ್ಯದಲ್ಲಿರುವ ಈ ಜನಾಂಗದವರನ್ನು ಗುರುತಿಸಿರುವ ಗ್ರಾಮ ತಾಲ್ಲೂಕು ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು, ಈ ಪೈಕಿ ಸಣ್ಣ ಮತ್ತು ಅತಿ ಸಣ್ಣ ಹಾಗೂ ಕೃಷಿ ಕಾರ್ಮಿಕರ ಕುಟುಂಬಗಳೆಷ್ಟು?*

ಇ) *ಈ ಜನಾಂಗದವರ ಗ್ರಾಮಗಳನ್ನು ಸದರಿ ಯೋಜನೆ ಜಾರಿಗೊಳಿಸಲು ಘೋಷಿಸಲಾಗಿದೆಯೇ? ಇಲ್ಲದಿದ್ದಲ್ಲಿ ಸರ್ಕಾರದ ಕ್ರಮಗಳಾವ್ಯಾವು?*

ಈ) *ರಾಜ್ಯದಲ್ಲಿ ಒಟ್ಟು ಅಲೆಮಾರಿ ಜನಾಂಗದವರು ರೇಷ್ಮೆ ಉದ್ಯಮದಲ್ಲಿ ತೊಡಗಿಸುವವರನ್ನು ಗುರುತಿಸಲಾಗಿದೆಯೇ? ಹಾಗಿದ್ದಲ್ಲಿ ಯಾವ ಗ್ರಾಮದಲ್ಲಿ ಎಷ್ಟು ಕುಟುಂಬಗಳಿರುವ್ಯಾವು ವಿವರ ನೀಡುವುದು?*

ಶ್ರೀ ವಿ. ಮುನಿಯಪ್ಪ (ರೇಷ್ಮೆ ಕೃಷಿ ರಾಜ್ಯ ಸಚಿವರು) :